ಸಭೆಯ ಮುಂದೆ ಮಂಡಿಸಲ್ಪಟ್ಟ ಕಾಗದ ಪತ್ರಗಳು

ಶ್ರಿ ಎಂ.ಎಂ. ಜೆ. ಸದ್ಯೋಜಾತ.—(ಸಾರಿಗೆ ಮತ್ತು ಸಣ್ಣ ನೀರಾವರಿ ಸಚಿವರು)ಮಾನ್ಯ ಅಧ್ಯಕ್ಷರೆ ಈ ಕೆಳಕಂಡ ಪತ್ರಗಳನ್ನು ನಾನು ಈ ಸಭೆಯ ಮುಂದಿಡುತ್ತೇನೆ.

1) Notification No. HD 41 TMR 80, dated 27th January. 1981

THE KARNATAKA MOTOR VEHICLES (THIRD AMENDMENT) RULES, 1981

under section 133 (3) of the Motor Vehicles Act, 1939.

ii) Notification No. HD 20 TMT 80, dated 9th January. 1981.

THE KARNATAKA MOTOR VEHICLES TAXATION (FIRST AMENDMENT) RULES, 1981.

under section 22 (4) of the Karnataka Motor Vehicles Taxation Act, 1957.

MR. SPEAKER.—papers laid

CALLING ATTENTION TO MATTERS OF URGENT PUBLIC IMPORTANCE

re.—College and University Teachers boycot of the Examinations of March April, 1981.

SHRI K. RAMESH KUMAR.—I wish to call the attention of the Hon. Minister for Education to the call given by the College and University teachers to boycot the examination of March April 1981. I want to bring to your kind notice that the Statement has not been given to me. I am prepared to take it –he can give it in the evening or tomorrow.

ಅಧ್ಯಕ್ಷರು.—ಸುಮಾರು ನಲವತ್ತೈದು ಪ್ರತಿಗಳನ್ನು ಸ್ವಲ್ಪ ಮುಂಚೆಯೇ ಹಂಚುವುದು ಒಳ್ಳೆಯದು.

† ಶ್ರೀ ಜಿ.ಬಿ. ತಂಕರರಾವ್.—ನಾವು ಮೊನ್ನೆ ದಿವಸವೇ ಕೊಟ್ಟಿದ್ದೇವೆ.

ಅಧ್ಯಕ್ಷರು.—ಅದು ಇನ್ನೂ ಸ್ವಲ್ಪ ಮುಂಚೆ ನಮಗೆಲ್ಲಾ ಬಂದರೆ ಅನುಕೂಲವಾಗುತ್ತದೆ. I am not referring to the particular issue. I am generalising.....

ಶ್ರೀ ಕೆ. ರಮೇಶಕುಮಾರ್.—ನಾವೇನು ತಮಾಷೆ ಮಾಡುವುದಕ್ಕೆ ವಿಷಯವನ್ನು ಕೇಳಿದ್ದೇವೆಯೇ? It only goes to prove the amount of seriousness with which the Hon. Minister has taken this. It is a serious issue.

---

† Indicates that remarks or speeches have not been revised by the member concerned.

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಗಮನ ಸೆಳೆಯುವ ಸೂಚನೆಗೆ ಉತ್ತರ ರೂಪವಾಗಿ ತಯಾರು ಮಾಡಿರುವ ಈ ಹೇಳಿಕೆಯನ್ನು ನಾನು ಸಭೆಯ ಮುಂದೆ ಓದುತ್ತೇನೆ.

The Government is aware of the call given by the Federation of University and College Teachers' Association of Karnataka and their reported decision to boycot the coming examinations.

The Federation of University and College Teachers' Association had submitted a charter of demands to the Government which related to time-bound promotions, restructuring of pay scale, grant of H.R.A. and C.C,A. to employees of Aided Institutions' etc.

The Government have had detailed discussions with the representatives of the Associations. After considering the demands the Government has issued orders in respect of some of the demands. The other demands such as time bound promotions restructuring the pay scale etc. have a bearing on other Departments of the Government and as such these issues cannot be considered in isolation, These require detailed examination.

Another important demand related to payment of gratuity to employees in private aided institutions. The Government is sympathetically considering this demand. The procedure prevailing in the neighbouring States is being ascertained.

ಶ್ರೀ ಕೆ. ರಮೇಶಕುಮಾರ್.—ಮಾನ್ಯ ಅಧ್ಯಕ್ಷರೇ, ಆಗಲೇ ಮಾನ್ಯ ಸಚಿವರು ನೀಡಿದ ಹೇಳಿಕೆಯನ್ನು ನಾನು ಕೇಳಿದೆ. ಕಾಲೇಜು ಉಪಾಧ್ಯಾಯರ ಬೇಡಿಕೆ ಏನಿದೆ, ಅದನ್ನು ಯಾವ ರೀತಿ ಪರಿಶೀಲನೆ ಮಾಡುತ್ತಿದ್ದಾರೆನ್ನುವ ಪ್ರಶ್ನೆಯಲ್ಲ, ವಿದ್ಯಾರ್ಥಿಗಳ ಪ್ರಶ್ನೆ ಇಲ್ಲಿ ಮುಖ್ಯವಾಗಿದೆ. ನಾವೀಗ ಫೆಬ್ರುವರಿ ತಿಂಗಳಲ್ಲಿ ಇದ್ದೇವೆ. ಪರೀಕ್ಷೆಗೆ ಸಂಬಂಧಿಸಿದ ವ್ಯವಹಾರಗಳು ಈಗ ಪ್ರಾರಂಭವಾಗಬೇಕು. ಏಪ್ರಿಲ್ ತಿಂಗಳಲ್ಲಿ ಪರೀಕ್ಷೆಗಳು ಪ್ರಾರಂಭವಾಗಬೇಕು. ಅದಕ್ಕಾಗಿ ಈಗಲೇ ಪ್ರಶ್ನೆ ಪತ್ರಿಕೆಗಳು ಸಿದ್ಧವಾಗಬೇಕು. How the government is going to comprehend the situation that would arise in the month of April to conduct the examination? ಪರೀಕ್ಷೆಯನ್ನು ಈ ವರ್ಷ ಮಾಡುವುದಿಲ್ಲ, ವಿದ್ಯಾರ್ಥಿಗಳನ್ನೆಲ್ಲ out-right ಆಗಿ ತೇರ್ಗಡೆ ಮಾಡಬೇಕೆಂದು ತೀರ್ಮಾನ ತೆಗೆದುಕೊಳ್ಳುವಿರೋ ಅಥವಾ ಈ ವರ್ಷವೂ ಅದೇ ತರಗತಿಯಲ್ಲಿ ಉಳಿಯಲೆಂದು ತೀರ್ಮಾನ ತೆಗೆದುಕೊಳ್ಳುವಿರೋ? " We will make alternative arrangements to conduct examinations." It is not that what are the charter of demands they have placed before you. Are you going to consider I am only interested in the well-being of students who are to face the examination in the coming April. What is the attitude of the Government so far as this aspect is concerned I would like to know from the Minister.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ಶಿಕ್ಷಕರು ಸಂಪು ಮಾಡುವುದರ ಬಗ್ಗೆ ನಿರ್ಧಾರ ತೆಗೆದುಕೊಂಡಿರುವುದನ್ನು ತಿಳಿಸಿದ್ದಾರೆ. ಕಳೆದ ವರ್ಷ ಶಿಕ್ಷಕರು ಚಳುವಳಿ ಮಾಡಿ, ಅವರ ಸೇವಾ ಸೌಕರ್ಯಗಳ ಬಗ್ಗೆ ಕೆಲವು ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ. ಅದರ ಜೊತೆಗೆ ಮಾನ್ಯ ಮುಖ್ಯಮಂತ್ರಿಯವರನ್ನು ಹಾಗೂ ಮಾನ್ಯ ವಿದ್ಯಾಮಂತ್ರಿಯವರನ್ನು ಕೂಡ ಭೇಟಿ ಮಾಡಿ ಮಾನವಿ

ಗಳನ್ನು ಕೊಟ್ಟಿದ್ದಾರೆ, ಮತ್ತು ಚರ್ಚೆ ಮಾಡಿದ್ದಾರೆ. ಧಾರವಾಡದಲ್ಲಿ ಶಿಕ್ಷಕರು ಉಪವಾಸ ಕುಳಿತಿರುವ ಸಂದರ್ಭದಲ್ಲಿ ಮಾನ್ಯ ವಿದ್ಯಾಮಂತ್ರಿಗಳನ್ನು ಭೇಟಿಯಾದ ಸಂದರ್ಭದಲ್ಲಿ ನಾನು ಕೂಡ ಅವರ ಜೊತೆಯಲ್ಲಿದ್ದೆ, ಮಾನ್ಯ ವಿದ್ಯಾಸಚಿವರು ಕೆಲವು ಸೌಕರ್ಯಗಳನ್ನು ಡಿಸೆಂಬರ್ ಅಂತ್ಯದೊಳಗೆ ಮಾಡತಕ್ಕ ಮಾತು ಕೊಟ್ಟರು, ಆದರೆ ಇದುವರೆವಿಗೂ ಮಾಷಲಿಲ್ಲ. ಮಾನ್ಯ ವಿದ್ಯಾಮಂತ್ರಿಯವರು ಮಾತು ಕೊಟ್ಟಂತೆ, ಶಿಕ್ಷಕರ ಬೇಡಿಕೆಗಳನ್ನು ಪೂರೈಸಲಿಲ್ಲ. ತಮಗೆ ಗೊತ್ತಿರುವ ಹಾಗೆ ನಮ್ಮ ಉತ್ತರ-ಕರ್ನಾಟಕ ಭಾಗದಲ್ಲಿ ಖಾಸಗೀ ವಿದ್ಯಾಸಂಸ್ಥೆಗಳು ಜಾಸ್ತಿ ಇವೆ. ಸರ್ಕಾರದ ಶಾಲಾ ಕಾಲೇಜುಗಳಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಯಾವ ರೀತಿಯ ಸೌಕರ್ಯಗಳು ಇವೆಯೋ ಅವುಗಳನ್ನು ಅವರಿಗೂ ಒದಗಿಸಬೇಕೆಂಬುದು ಅವರ ಮೂಲಭೂತವಾದ ಬೇಡಿಕೆ. ಇವರ ಬಗ್ಗೆ ಸರ್ಕಾರ ಆಲೋಚನೆ ಮಾಡಿ ನಿರ್ಧಾರ ತೆಗೆದುಕೊಳ್ಳಬೇಕಾಗಿತ್ತು. ಹಣಕಾಸಿನ ಒಂದು ಪ್ರಶ್ನೆ ಇದೆ ಎಂಬುದನ್ನು ನಾನು ಒಪ್ಪುತ್ತೇನೆ. ಒಂದು ವರ್ಷದಿಂದಲೂ ಅನೇಕ ಸಲ ಮಾನ್ಯ ವಿದ್ಯಾಮಂತ್ರಿಯವರನ್ನು ಭೇಟಿಯಾಗಿ ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿಯಾಗಿ ವಿಚಾರಗಳನ್ನು ಚರ್ಚೆ ಮಾಡಿದ್ದರೂ ಇದುವರೆವಿಗೂ ಸರ್ಕಾರ ಏತಕ್ಕೆ ನಿರ್ಣಯ ತೆಗೆದುಕೊಂಡಿಲ್ಲ. ಈ ಬಗ್ಗೆ ಇದುವರೆವಿಗೂ ಸರ್ಕಾರದಿಂದ ನಿರ್ದಿಷ್ಟವಾದ ಉತ್ತರ ಇಲ್ಲ,ಕಾರಣ ಏನು? ಈಬಗ್ಗೆ ಸರ್ಕಾರ ಕೂಡಲೇ ಮಾತು ಕೊಟ್ಟ ಪ್ರಕಾರ ಶಿಕ್ಷಕರ ಬೇಡಿಕೆಗಳನ್ನು ಪೂರೈಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಶಿಕ್ಷಕರ ಸಂಘಿನ ಪರಿಣಾಮ ವಿದ್ಯಾರ್ಥಿಗಳ ಮೇಲೆ ಆಗುತ್ತೆ, ಅವರು ಪ್ರಶ್ನೆ ಪತ್ರಿಕೆಗಳನ್ನು ತೆಗೆಯುವುದಿಲ್ಲ, ಪರೀಕ್ಷೆಗೆ ಭಾಗವಹಿಸುವುದಿಲ್ಲ. ನಾಳೆ ಏನು ಒಂದು ಗೊಂದಲ ಪರಿಸ್ಥಿತಿ ನಿರ್ಮಾಣವಾಗುತ್ತೆ, ಅದಕ್ಕೆ ಮೊದಲು ಈ ಬಗ್ಗೆ ಸರ್ಕಾರ ನಿರ್ದಿಷ್ಟವಾದ ಉತ್ತರ ಕೊಡಬೇಕೆಂದು ಹೇಳುತ್ತೇನೆ.

SRI A. LAKSHMISAGAR.—Sir, the problems of teachers are age-old, if I may say so. Teacher community is the most neglected community. I humbly submit, I have the honour to belong to that fraternity.

MR. SPEAKER —Sometime back I also belonged to that fraternity, even the Education Minister also.

SRI A. LAKSHMISAGAR —I am sorry he has not been able to attach so much importance as is expected of him, being once a teacher. Sir, the total demands have already been made public and they have submitted the details of their demands to the Government. The outstanding demands have already been listed. Sir, a teacher is the most ill-paid servant of the people. It is there throughout the world, but worse, I say, in our country and in our State. Therefore, Sri G.B. Shankara Rao (Hon. Minister for Education) must be able to come in a big way and help these teachers. Teachers are builders of builders, and they have been suffering from these difficulties for ages and for decades. Since they did not have sufficient strength on earlier occasions they were not able to put forward their demands. Now they are united. A crying child only gets milk. Now they have been able to pinpoint all their demands and there is no reason why it should not be conceded. Sooner you concede their demands better it would be, It would be in the interest of the society as a whole. If teachers resort to strike, whether they are intentional or otherwise, they are transferring this tendency to their students also. This, you must be able to avoid. Therefore, you have to concede all their legitimate reasonable demands and see that they do not go on strike

and the difficult situation is obviated by timely intervention. There is no point in telling, that the Chief Minister has no time and the Education Minister has no time. You must find time. What they have said is, since the Chief Minister has no time they are unable to meet him.

My submission to the Government is, this is high time they should wake up from their deep slumber and come to the rescue of teachers and meet their legitimate demands.

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಬಸವನಗುಡಿ).—ಸ್ವಾಮಿ, ರಾಜ್ಯದ ಶಿಕ್ಷಕರ ಬೇಡಿಕೆಗಳ ಬಗ್ಗೆ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳೊಡನೆ ಹಲವಾರು ಸಭೆಗಳನ್ನು ನಡೆಸಿ, ಅವರ ೧೪ ಬೇಡಿಕೆಗಳಲ್ಲಿ ೪ ಬೇಡಿಕೆಗಳನ್ನು ಪೂರೈಸಿದ್ದಾರೆ. ಮತ್ತೆ ಅವರು ಪ್ರಮುಖವಾಗಿ ಮೂರು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟು, ಇವುಗಳನ್ನು ಸರ್ಕಾರ ಪೂರೈಸಿದ್ದರೆ ಮಾರ್ಚ್-ಏಪ್ರಿಲ್ ಪರೀಕ್ಷೆಗಳಿಗೆ ಬಹಿಷ್ಕಾರ ಹಾಕಲಾಗುವುದೆಂದು ತಿಳಿಸಿದ್ದಾರೆ. ಅವರ ಪ್ರಮುಖವಾದ ಬೇಡಿಕೆಗಳಲ್ಲಿ ಒಂದು ಟೈಂ ಬೌಂಡ್ ಸ್ಕೇಲ್ ಮೇಲೆ ಪ್ರೊಮೋಷನ್ ಕೊಡತಕ್ಕಂಥಾದ್ದು ; ಮಾನ್ಯ ಮಂತ್ರಿಯವರು ದಯವಿಟ್ಟು ಈ ವಿಚಾರವನ್ನು ಜಾಗ್ರತೆ ಪರಿಹಾರ ಮಾಡಬೇಕು. ಶ್ರೀ ನಾರಾಯಣ ಪೈ ಪೇ ಕಮಿಷನ್ ಪ್ರಕಾರ ಉಪಾಧ್ಯಾಯರ ಸಂಬಳಗಳನ್ನು ರಿವೈಸ್ ಮಾಡುವುದು ; ಸರ್ಕಾರದವರೇ ನೇಮಕ ಮಾಡಿದಂಥ ಆಯೋಗದಿಂದ ಉಪಾಧ್ಯಾಯರ ಸಂಬಳಗಳನ್ನು ಸರಿ ಮಾಡದಿದ್ದರೆ ಹೇಗೆ ? ನನ್ನ ಅಭಿಪ್ರಾಯದಲ್ಲಿ ನಮ್ಮ ಸರ್ಕಾರದ ನೌಕರರ ಪೈಕಿ ಉಪಾಧ್ಯಾಯರ ಮತ್ತು ವೈದ್ಯರ ಸೇವೆ ಶ್ರೇಷ್ಠವಾದ ಸೇವೆ ಎಂದು ನಾನು ತಿಳಿದುಕೊಂಡಿದ್ದೇನೆ. ಉಪಾಧ್ಯಾಯರನ್ನು ಮತ್ತು ವೈದ್ಯರನ್ನು ಅತೃಪ್ತರನ್ನಾಗಿ ಇಡುವುದು ಅಷ್ಟು ಸಮಂಜಸವಲ್ಲ. ಉಪಾಧ್ಯಾಯರು ಅತೃಪ್ತರಾದರೆ ನಮ್ಮ ಭಾರತದ ಮುಂದಿನ ಪ್ರಜೆಗಳನ್ನು ತರಪೇತು ಮಾಡುವುದಕ್ಕಾಗುವುದಿಲ್ಲ. ವೈದ್ಯರು ಅತೃಪ್ತರಾದರೆ ಖಾಯಿಲೆ ಮಲಗಿರತಕ್ಕ ರೋಗಿಗಳ ಗತಿ ಏನಾಗುತ್ತದೆಂಬುದನ್ನು ಯೋಚನೆ ಮಾಡಬೇಕು. ಈ ಎರಡು ಸೇವೆಯಲ್ಲಿರತಕ್ಕವರ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸುವುದು ಸರ್ಕಾರದ ಆದ್ಯ ಕರ್ತವ್ಯ. ಮಾನ್ಯ ವಿದ್ಯಾಮಂತ್ರಿಯವರು ಫೆಡರೇಷನ್ನಿನವರನ್ನು ಕರೆಸಿ, ಅವರೊಂದಿಗೆ ಸಮಾಲೋಚನೆ ಮಾಡಿ ; ಪ್ರಮುಖವಾದ ಅವರ ಮೂರು ಬೇಡಿಕೆಗಳನ್ನು ಈಡೇರಿಸಿ, ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ನಡೆಯುವ ಪರೀಕ್ಷೆಗಳಿಗೆ ತೊಂದರೆಯಾಗದ ರೀತಿಯಲ್ಲಿ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆಂದು ನಾನು ಭಾವಿಸುತ್ತೇನೆ.

ಶ್ರೀ ವಿ.ಬಿ. ಭಾವಿ.—ಮಾನ್ಯ ಅಧ್ಯಕ್ಷರೇ, ಈಗ ತಾನೇ ಆ ಕಡೆ ಇರತಕ್ಕ ಮಾನ್ಯ ಸದಸ್ಯರಾದ ಶ್ರೀ ಎ. ಲಕ್ಷ್ಮಿಸಾಗರ್ ಅವರು ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತು ಮಾನ್ಯ ಶಿಕ್ಷಣ ಮಂತ್ರಿಯವರಿಗೆ ವೇಳೆ ಇಲ್ಲ ಎಂದು ತಿಳಿಸಿದರು.

ಶ್ರೀ ಜಿ.ಬಿ. ಶಂಕರರಾವ್.—ನಾವು ಈಗಾಗಲೇ ಭೇಟಿ ಮಾಡಿದ್ದೇವೆ.

ಶ್ರೀ ವಿ.ಬಿ. ಭಾವಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಶಿಕ್ಷಣ ಸಚಿವರು ಗಂಟೆಗಟ್ಟಲೆ ಚರ್ಚೆ ಮಾಡಿ ಅವರ ಬೇಡಿಕೆಗಳಲ್ಲಿ ಕೆಲವು ಬೇಡಿಕೆಗಳನ್ನು ಒಪ್ಪಿದ್ದಾರೆಂದು ತಿಳಿದು ಬಂದಿದೆ. ಸರ್ಕಾರ ಆಜ್ಞೆ ಹೊರಡಿಸಿದ್ದರಲ್ಲಿ ಬಿ.ಎಡ್. ಕಾಲೇಜು ಅಧ್ಯಾಪಕರಿಗೆ ಮತ್ತು ಉಳಿದ ಕಾಲೇಜು ಯೂನಿವರ್ಸಿಟಿ ಅಧ್ಯಾಪಕರಿಗೆ ಸಿಕ್ಕತಕ್ಕ ವೇತನ ಏನಿದೆ ಎಂದರೆ ಸ್ಟಾರ್ಟಿಂಗ್ ಸ್ಕೇಲ್ ೭೫೦ ರೂಪಾಯಿಗಳಿಂದ ಇದೆ. ಆದೇ ಪ್ರಕಾರ ಸ್ಕೇಲ್ ಕೊಡುತ್ತೇವೆಂದು ಅವರು ಭರವಸೆ ಕೊಟ್ಟಿದ್ದಾರೆಂದು ಬಲ್ಲ ಮೂಲಗಳಿಂದ ತಿಳಿದು ಬಂದಿದೆ. ಆದನ್ನು ಸರ್ಕಾರಿ ಆಜ್ಞೆಯಲ್ಲಿ ಹೊರಡಿಸುವಾಗ ವಿತ್ ದಿ ರೆಟ್ರಾಸ್‌ಪೆಕ್ಟೀವ್ ಎಫೆಕ್ಟ್ ೧೯೭೭ರಿಂದ ಇದನ್ನು ಜಾರಿಗೊಳಿಸಲಾಗುವುದು ಎಂದು ತಿಳಿದುಬಂದಿದೆ. ಸರ್ಕಾರಿ ಆಜ್ಞೆಯಲ್ಲಿ ೧೯೮೧ನೇ ಇಸವಿಯಿಂದ ಜಾರಿಗೊಳಿಸಿದ್ದಾರೆ. ಇನ್ನು ಕೆಲವು ಬೇಡಿಕೆಗಳು ಇವೆ. ನಾಲ್ಕು ಯೂನಿವರ್ಸಿಟಿಗಳವರು ರೆಸಲ್ಯೂಷನ್ ಪಾಸ್ ಮಾಡಿ ಸರ್ಕಾರದ ಒಪ್ಪಿಗೆಗಾಗಿ ಕಳುಹಿಸಿ ಕೊಟ್ಟಿದ್ದಾರೆ. ಸರ್ಕಾರ ಈ ವಿಚಾರದಲ್ಲಿ ವಿಳಂಬ ಮತ್ತು ಹೆಚ್ಚಿನ ಆತಂಕಗಳಿಗೆ ಅವಕಾಶ ಕೊಡದೆ ಮಾನ್ಯ ಶಿಕ್ಷಣ ಮಂತ್ರಿಯವರು ಮತ್ತು ಮಾನ್ಯ ಮುಖ್ಯಮಂತ್ರಿಯವರು ಕೂಲಂಕಷ ವಿಚಾರಮಾಡಿ ಬಗೆಹರಿಸಬೇಕೆಂದು ಹೇಳುತ್ತೇನೆ. ಎಲ್ಲ ಅಧ್ಯಾಪಕರ ಬೇಡಿಕೆಗಳು ನಿಜವಾದ ಬೇಡಿಕೆಗಳಾಗಿವೆ. ಆದುದರಿಂದ ಮಾನ್ಯ ಮಂತ್ರಿಯವರು ವಿಳಂಬಕ್ಕೆ ಆಸ್ಪದ

ಕೊಡದೇ, ಮುಂದೆ ಆಗತಕ್ಕಂಥ ತೊಂದರೆಗಳಿಗೆ ಅವಕಾಶ ಕೊಡಬಾರದು ಎಂದು ಹೇಳಿ ಅವರ ಬೇಡಿಕೆಗಳನ್ನು ಮಂಜೂರು ಮಾಡಿಕೊಡಬೇಕೆಂದು ನಾನು ಮಾನ್ಯ ಶಿಕ್ಷಣ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಅಧ್ಯಕ್ಷರೇ, ಶಿಕ್ಷಕರು ತಮ್ಮ ಹಲವಾರು ಬೇಡಿಕೆಗಳನ್ನು ಇಟ್ಟು ಅವುಗಳನ್ನು ಪೂರೈಸದೇ ಇದ್ದರೆ ಪರೀಕ್ಷೆಗಳನ್ನು ಬಹಿಷ್ಕಾರ ಮಾಡುತ್ತೇವೆಂದು ಕರೆ ಕೊಟ್ಟಿದ್ದಾರೆ. ಅವರ ಬೇಡಿಕೆಗಳ ಬಗ್ಗೆ ಇಲ್ಲಿ ಚರ್ಚೆ ಮಾಡಲಿಕ್ಕೆ ಸಾಕಷ್ಟು ಸಮಯ ಇಲ್ಲ. ಈ ಬೇಡಿಕೆಗಳು ಸುಮಾರು ಹತ್ತಾರು ವರ್ಷಗಳಿಂದಲೂ ಇದೆ. ಇನ್ನು ಎರಡನೆಯದಾಗಿ ಸರ್ಕಾರ ಹಾಕಿಕೊಂಡಿರತಕ್ಕ ನೀತಿ ಚೌಕಟ್ಟು ಯಾವುದು ಇದೆ, ಅದನ್ನು ಏೀರಿ ಯಾವ ಬೇಡಿಕೆಗಳು ಇಲ್ಲ. ಸರ್ಕಾರದ ಒಂದು ಅಲಕ್ಷ್ಯದಿಂದ ಹತ್ತಾರು ವರ್ಷಗಳಾದರೂ ಅವರ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಆಗಿಲ್ಲ. ಶಿಕ್ಷಕರು ಮುಷ್ಕರ ಮಾಡುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಬೇಡಿ ಎಂದು ಮಾನ್ಯ ವಿದ್ಯಾಮಂತ್ರಿಯವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಈ ಬಗ್ಗೆ ಮೇಲ್ಮನೆಯಲ್ಲಿ ಸ್ಪಷ್ಟವಾದ ಒಂದು ಆದೇಶವನ್ನು ಕೊಟ್ಟಿದ್ದೀರಿ ; ಅವರನ್ನು ಕರೆಸಿ ಮಾತನಾಡುತ್ತೇವೆಂದು ಹೇಳಿದ್ದೀರಿ. ಮಾನ್ಯ ಶಿಕ್ಷಣ ಮಂತ್ರಿಯವರು ಪ್ರತಿಷ್ಠೆ ಮೇಲೆ ನಿಲ್ಲಬಾರದು. ಶಿಕ್ಷಕರು ಪರೀಕ್ಷೆಗಳನ್ನು ಬಹಿಷ್ಕಾರ ಮಾಡುವವರೆಗೆ ಬಿಡದೇ ಅವರನ್ನು ಕೂಡಲೇ ಕರೆಸಿ ಮಾತುಕತೆ ನಡೆಸಿ ಅವರ ಸಮಸ್ಯೆಗಳನ್ನು ಬಗೆಹರಿಸಬೇಕು. ಅವರ ಬೇಡಿಕೆಗಳು ನೀವು ಹಾಕಿಕೊಂಡಿರತಕ್ಕ ನೀತಿ, ಚೌಕಟ್ಟಿನಲ್ಲಿಯೇ ಬರುತ್ತವೆ. ಈಗ ತಾವು ಎಜುಕೇಷನ್ ಡಿಪಾರ್ಟ್‌ಮೆಂಟಿಗೆ ಒಂದು ಚಾಟಿ ತೆಗೆದುಕೊಂಡು ಹೊಡೆದರೆ, ಆ ಸಮಸ್ಯೆಗಳನ್ನು ಬಹುಬೇಗ ಬಗೆಹರಿಸಬಹುದು. ಈ ವಿಚಾರದಲ್ಲಿ ಮಾನ್ಯ ಶಿಕ್ಷಣ ಮಂತ್ರಿಯವರು ಹೆಚ್ಚು ಇಂಟರೆಸ್ಟ್ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ವಿಳಂಬ ಆಯಿತು ಎಂದರೆ ಮತ್ತೆ ಬಹಿಷ್ಕಾರ ಮಾಡುತ್ತಾರೆ ಮತ್ತೆ ಬಡ್ಜೆಟ್ ಅಧಿವೇಶನದಲ್ಲಿ ಚರ್ಚೆಗೆ ಬರುತ್ತದೆ. ಅವರು ಸುಸೂತ್ರವಾಗಿ ಕರ್ತವ್ಯ ಮಾಡಲಿಕ್ಕೆ ಅನುವು ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ರಾಮದೇವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಳ್ಳೂರು ಆನಂದರಾವ್ ಅವರು ಶಿಕ್ಷಕರ ಬಗ್ಗೆ ಕಳಕಳಿಯಿಂದ ಮಾತನಾಡಿದ್ದಾರೆ. ಆದರೆ ಅವರು ಆ ಕಡೆ ಹೋದಮೇಲೆ ಸ್ವಲ್ಪ ಚೇಂಜ್ ಆಗಿದ್ದಾರೆ. ಟೀಚರ್ಸ್ ಬಗ್ಗೆ ಅವರ ರಕ್ತದ ಕಣಗಳಲ್ಲಿಯೂ ತೀವ್ರತೆ ಇದೆ. ಆದರೆ ಆ ತೀವ್ರತೆ ಇವೊತ್ತು ಇಲ್ಲ.

ಶ್ರೀ ಮಳ್ಳೂರು ಆನಂದರಾವ್.—ಅಲ್ಲಿದ್ದಾಗ ತೀವ್ರತೆ ಬೇಕಾಗುತ್ತದೆ, ಇಲ್ಲಿ ತೀವ್ರತೆ ಇಲ್ಲದೆ ಕೆಲಸ ಮಾಡಬಹುದು.

ಶ್ರೀ ಪಿ. ರಾಮದೇವ್.—ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ವಿದ್ಯಾಮಂತ್ರಿಯವರಿಗೆ ಈ ಶಿಕ್ಷಕರ ಬೇಡಿಕೆಗಳ ವಿಚಾರದಲ್ಲಿ ಇರತಕ್ಕಂಥ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಕಷ್ಟು ಸಮಯ ಇಲ್ಲ ಎಂದು ಕಾಣಿಸುತ್ತದೆ. ನಾನು ಒಂದು ವರ್ಷದಿಂದಲೂ ನೋಡುತ್ತಿದ್ದೇನೆ. ಅವರ ಮುಂದೆ ಯಾವುದೇ ಸಮಸ್ಯೆ ಇಟ್ಟರೂ ಒಂದು ಗಂಟೆ ಕಾಲ ಮಾತನಾಡುತ್ತಾರೆ. ಈಗ ಇವರು ಇಟ್ಟಿರತಕ್ಕ ಬೇಡಿಕೆಗಳು ಸರಳವಾದುವು. ಫೆಡರೇಷನ್ ಆಫ್ ಯೂನಿವರ್ಸಿಟಿ ಮತ್ತು ಕಾಲೇಜ್ ಟೀಚರ್ಸ್ ಅಸೋಸಿಯೇಷನ್ ಅವರು ಸುಮಾರು ನಾಲ್ಕೈದು ವರ್ಷದಿಂದಲೂ ತಮ್ಮ ಬೇಡಿಕೆಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಆದರಲ್ಲಿ ಕೆಲವನ್ನು ಮಾತ್ರ ಸಾಲ್ವ್ ಮಾಡಿದ್ದಾರೆ. Some of the demands we have issued orders ಎಂದು ಹೇಳಿದ್ದಾರೆ. ಸಣ್ಣಪುಟ್ಟ ಬೇಡಿಕೆಗಳ ಬಗ್ಗೆ ಮಾಡಿದ್ದಾರೆಯೇ ಹೊರತು ಮೇಜರ್ ಡಿಮ್ಯಾಂಡ್‌ಗಳನ್ನು ಮಿಟ್ ಮಾಡಿಲ್ಲ. ಗ್ರಾಮಪಂಚಾಯಿತಿ ಲೆಕ್ಕವಲ್ಲಿ ತೀರ್ಮಾನ ಮಾಡಿದಂತೆ ಮಾಡುತ್ತಿದ್ದಾರೆ. ಮೇಜರ್ ಡಿಮ್ಯಾಂಡ್ ಮಿಟ್ ಮಾಡತಕ್ಕ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು. ತಾವು ಶಾಸಕರುಗಳಿಗೆ ಹೇಳಿದ ಹಾಗೆ ಇವೊತ್ತು ನಾಳೆ ಎಂದು ಅವರಿಗೆ ಹೇಳಲಿಕ್ಕೆ ಹೋಗಬೇಡಿ. ಅದರಲ್ಲಿ ಲಕ್ಷಾಂತರ ಮಕ್ಕಳ ಭವಿಷ್ಯ ಇದೆ. ಇನ್ನು ಪರೀಕ್ಷೆಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ಸೆಟ್ ಮಾಡಿಲ್ಲ. ತಾವು ಪ್ರಶ್ನೆಪತ್ರಿಕೆಗಳನ್ನು ಯಾವಾಗ ಸೆಟ್ ಮಾಡಿಸುತ್ತೀರಾ ? ನೀವು ಏನಾದರೂ ಡಿಲೇ ಮಾಡಿದರೆ ಮಕ್ಕಳಿಗೆ ದ್ರೋಹ ಮಾಡಿದಂತೆ ಆಗುತ್ತದೆ. ನೀವು ಪರಿಹಾರ ಮಾಡದೇ ಹೋದರೆ ಮುಂದಿನಸಾರಿಗೆ ತಮ್ಮನ್ನು ರಾಜೀನಾಮೆ ಕೇಳಬೇಕಾಗುತ್ತದೆ. ಇಷ್ಟು ಹೊತ್ತಿಗೆ ಪ್ರಶ್ನೆ ಪತ್ರಿಕೆಗಳು ಪ್ರಿಂಟ್‌ಗೆ ಹೋಗಬೇಕಾಗಿತ್ತು. ಇನ್ನು ಎರಡು ತಿಂಗಳಲ್ಲಿ ಏನು ಪರೀಕ್ಷೆ ನಡೆಸುತ್ತೀರಾ ? ಈ ಪ್ರಶ್ನೆ ಪತ್ರಿಕೆಗಳೇನೂ ಪೋಲೀಸರ ಕೈಯಲ್ಲಿ ಮಾಡಿಸಲಿಕ್ಕೆ ಆಗುವುದಿಲ್ಲ. ನಿಮ್ಮ ಕೈಯಲ್ಲಿ ಪ್ರಾಬ್ಲಮ್ ಸಾಲ್ವ್ ಮಾಡಲಿಕ್ಕೆ ಆಗಲಿಲ್ಲ ಎಂದರೆ ಎಲ್ಲ

ಮಕ್ಕಳಿಗೂ ಪ್ರಮೋಷನ್ ಕೊಟ್ಟುಬಿಡಿ. ಟೀಚರ್ಸ್ ಅನ್ಯಾಯದ ಬೇಡಿಕೆಯನ್ನು ಹಾಕಿಲ್ಲ. ಈಗ ಟೀಚರ್ಸ್ ಮುಷ್ಕರ ಮಾಡುವುದೇ ಇರುವುದೇ ದೊಡ್ಡದು. ಅವರು ಮುಷ್ಕರ ಮಾಡಲಿಕ್ಕೆ ಅವಕಾಶ ಕೊಡಬೇಡಿ. ಈ ವಿಚಾರವನ್ನು ತೀವ್ರವಾಗಿ ತೆಗೆದುಕೊಂಡು ಪರಿಹಾರ ಮಾಡಿ. ಅದಕ್ಕೆ ನಮ್ಮ ಸಹಕಾರ ಕೊಡುತ್ತೇವೆಂದು ಹೇಳುತ್ತೇನೆ.

ಶ್ರೀ ಜಿ.ಬಿ. ಶಂಕರರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಲ್ಲಿ ಕೆಲವರು, ಮಾನ್ಯ ಶಿಕ್ಷಣ ಮಂತ್ರಿಯವರಿಗೆ ಮಾನ್ಯ ಮಂತ್ರಿ ಮಂತ್ರಿಯವರಿಗೆ ಶಿಕ್ಷಕರನ್ನು ಕರೆಸಿಕೊಂಡು ಅವರೊಡನೆ ಸಮಾಲೋಚನೆ ಮಾಡಲಿಕ್ಕೆ ಸಮಯವಿಲ್ಲ ಎಂದು ಆಪಾದನೆ ಮಾಡಿರುವುದು ಸರಿಯಲ್ಲ. ಒಂದು ಸಾರಿ ಅಲ್ಲ, ನಾಲ್ಕು ಸಾರಿ ಅವರನ್ನು ಕರೆಸಿ ಸಮಾಲೋಚನೆ ಮಾಡಿ ದೀರ್ಘವಾದ ಚರ್ಚೆಮಾಡಿ ಅವರನ್ನು ನಾವು ಒಪ್ಪಿಸಿದ್ದೇವೆ. ಯಾವುದು ಪರಿಹಾರಕ್ಕೆ ಸಾಧ್ಯವಿದೆ ಅದರ ಬಗ್ಗೆ ನಾವು ಸಮಕ್ಷಮ ಚರ್ಚೆ ಮಾಡಿದ್ದೇವೆ, ಅವರು ಒಪ್ಪಿಕೊಂಡಿದ್ದಾರೆ. ಪರಿಹಾರಕ್ಕೆ ಸಾಧ್ಯವಾಗದೇ ಇದ್ದಂತಹ ಸಮಸ್ಯೆಗಳು ಈ ರೀತಿ ಇದೆ ಎಂದು ಹೇಳಿದ್ದೇವೆ. ಸದ್ಯದ ಪರಿಸ್ಥಿತಿಯಲ್ಲಿ ಕೆಲವು ಬೇಡಿಕೆಗಳಿಗೆ ಪರಿಹಾರ ಹೇಳಲಿಕ್ಕೆ ಸಾಧ್ಯವಿಲ್ಲ. ಆದರ ಬಗ್ಗೆ ಪುನಃ ಸಮಾಲೋಚನೆ ಮಾಡುತ್ತೇವೆಂದು ಹೇಳಿದ್ದೇವೆ. ಇಷ್ಟೆಲ್ಲಾ ಆದರೂ ಬೇರೆ ಕಡೆ ಕೆಲವರು ಹೋಗಿ ನಾವು ಪರೀಕ್ಷೆಗಳನ್ನು ಬಾಯ್‌ಕಾಟ್ ಮಾಡುತ್ತೇವೆಂದು ಪ್ರಕಟಣೆಯನ್ನು ಪತ್ರಿಕೆಗಳಿಗೆ ಕೊಡುತ್ತಿದ್ದಾರೆ. ನಮ್ಮ ಕಡೆಗೆ ಎರಡು ಪತ್ರಗಳನ್ನು ಕಳುಹಿಸಿಕೊಟ್ಟಿದ್ದಾರೆ. ನಾವು ಇಷ್ಟು ಹೇಳಿದಮೇಲೂ ಕೌನ್ಸಿಲ್‌ನಲ್ಲಿ ಹೇಳಿದ್ದಾರೆ. ಪತ್ರಿಕೆಯಲ್ಲಿ ಹೇಳಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಯೋಗ್ಯವಲ್ಲದ ಕೆಲವು ಬೇಡಿಕೆಗಳು ಆಗುವುದಿಲ್ಲ ಎಂದು ಹೇಳಿದ್ದೇವೆ.

ಶ್ರೀ ಪಿ. ರಾಮದೇವ್.—ಪರಿಹಾರಕ್ಕೆ ಯೋಗ್ಯವಲ್ಲದ ಬೇಡಿಕೆಗಳು ಯಾವುದು ಎಂಬುದನ್ನು ಮಾನ್ಯ ವಿದ್ಯಾಮಂತ್ರಿಯವರು ತಿಳಿಸುತ್ತಾರೆಯೆ ?

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರು ದಯಮಾಡಿ ಕೇಳಬೇಕು. ನಾನು ಪ್ರತಿಯೊಂದನ್ನು ತಿಳಿಸುತ್ತೇನೆ. ಪರಿಹಾರಕ್ಕೆ ಸಾಧ್ಯವಾಗದಿರುವುದನ್ನು ಕೇಳುವುದು ಇದೆ. ಅಂಥಾದ್ದರ ಬಗ್ಗೆ ನಾನು ಹೇಳುತ್ತಿದ್ದೇನೆ. ಇಲ್ಲಿ ಪ್ರಮುಖವಾದ ೩ ಬೇಡಿಕೆಗಳನ್ನು ಕೇಳಿದ್ದಾರೆ. ಮೊದಲನೆಯದು ಮನೆ ಬಾಡಿಗೆ, ಅಂದರೆ ಹೆಚ್.ಆರ್.ಎ ; ಸಿ.ಸಿ.ಎ. ಇವುಗಳನ್ನು ಸರ್ಕಾರೀ ಕಾಲೇಜಿನಲ್ಲಿರುವ ಲೆಕ್ಚರರ್ಸ್‌ಗೆ ಕೊಡುತ್ತಿರುವಂತೆ ನಮಗೂ ಕೊಡಬೇಕೆಂದು ಖಾಸಗೀ ಕಾಲೇಜಿನ ಲೆಕ್ಚರರ್ಸ್ ಕೇಳುತ್ತಿದ್ದಾರೆ. ನಾವು ಇದನ್ನು ಕೊಡುತ್ತೇವೆಂದು ಒಪ್ಪಿಕೊಂಡಿದ್ದೇವೆ. ಮತ್ತು ಇದರ ಬಗ್ಗೆ ಒಂದು ಆದೇಶವನ್ನೂ ಕೂಡ ಹೊರಡಿಸಿದ್ದೇವೆ. ಇನ್ನು ಎರಡನೆಯದಾಗಿ ತರಬೇತಿ ಕಾಲೇಜುಗಳಲ್ಲಿ ಕೆಲಸ ಮಾಡತಕ್ಕ ಲೆಕ್ಚರರ್ಸ್‌ಗಳ ವೇತನ ಶ್ರೇಣಿಯಲ್ಲಿ ವ್ಯತ್ಯಾಸ ಇದೆ ಎಂದು ಹೇಳುತ್ತಿದ್ದಾರೆ. ಇದನ್ನು ನಾವು ಪರಿಹರಿಸಲು ಕೆಲವು ತೊಡಕುಗಳು ಅಡ್ಡಿ ಬರುತ್ತವೆ. ಈ ಉದ್ದೇಶದಿಂದಲೇ ಅವರಿಗೆ ವಿಶೇಷ ಸಂಬಳ ಎಂದು ೯೦ ರೂಪಾಯಿ ಗಳನ್ನು ಕೊಟ್ಟಿದ್ದೇವೆ. ಅವರು ಇದರಿಂದ ತೃಪ್ತಿ ಹೊಂದಿದ್ದಾರೆ. ಆದರೆ ತಾವು ಏನು ಹೇಳುತ್ತಿದ್ದೀರಿ ಎಂದರೆ ಟೈಂ ಬೌಂಡ್ ಸ್ಕೇಲ್ ಕೊಡಬೇಕು ಎಂದು. ಮತ್ತು ಸರ್ಕಾರೀ ಕಾಲೇಜುಗಳಲ್ಲಿ ಆಥವಾ ಖಾಸಗೀ ಕಾಲೇಜುಗಳಲ್ಲಿ ಕೆಲಸ ಮಾಡತಕ್ಕ ಲೆಕ್ಚರರ್ಸ್‌ಗೆ ೧೦–೧೫ ವರ್ಷದ ನಂತರ ಬಡ್ತಿ ಬರಬೇಕೆಂದು ಹೇಳುತ್ತಿದ್ದೀರಿ. ಆದರೆ ಇದನ್ನು ಮಾತ್ರ ನಾವು ಹೇಳುವುದಕ್ಕೆ ಬರುವುದಿಲ್ಲ. ಇದು ಅವರ ಅರ್ಹತೆ ಮೇಲೆ ಕೊಡಬೇಕಾದಂಥಾದ್ದು. How many posts we have to create ? Entire pattern of pay scales has to be changed. We will be disturbing the entire pay strueture of all the Departments. ಈಗ ನಾವು ಇದೊಂದು ಇಲಾಖೆಯ ಬಗ್ಗೆ ಕ್ರಮ ತೆಗೆದುಕೊಂಡರೆ ಪುನಃ ನಮ್ಮ ಸರ್ಕಾರದ ಪ್ರತಿಯೊಂದು ಇಲಾಖೆಯಲ್ಲೂ ಬದಲಾವಣೆ ಮಾಡಬೇಕಾಗುತ್ತದೆ. ಆಗ ಇದು ತೊಡಕಿನ ಪ್ರಶ್ನೆಯಾಗುತ್ತದೆ. ಅಲ್ಲದೆ ಇಡೀ ವೇತನ ಶ್ರೇಣಿಯನ್ನೇ ಕಲಕಿದಂತಾಗುತ್ತದೆ. That is why I say it is impracticable. I believe you are convinced with my answer. ಆದ್ದರಿಂದ ಇದನ್ನು ನಾವು ಕಾರ್ಯಗತ ಮಾಡುವುದ ಕ್ಕಾಗುವುದಿಲ್ಲ. ಸಾಮಾನ್ಯವಾಗಿ ೫–೧೦–೧೫ ವರ್ಷಗಳವರೆಗೂ ಸೀನಿಯಾರಿಟಿ ಸಿಕ್ಕದೇ ಇದ್ದರೆ ಮೇಲಿನ ಹುದ್ದೆಗೆ ಬಡ್ತಿ ಕೊಡಬೇಕೆಂದರೆ ಆಗ ಅವನಿಗೆ ಇರತಕ್ಕ ವರ್ಕ್ ಲೋಡ್ ಏನು ? ಆರ್ಥಿಕವಾಗಿ ಸರ್ಕಾರಕ್ಕೆ ಎಷ್ಟು ಖರ್ಚು ಬರುತ್ತದೆ ಎಂಬುದನ್ನೆಲ್ಲಾ ನೋಡಬೇಕಾಗುತ್ತದೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಸ್ವಾಮಿ, ಕಂದಾಯ ಇಲಾಖೆಯಲ್ಲೂ ಸಹ ಒಂದೇ ತರಹ ಪೇ ಸ್ಕೇಲ್ ಇಲ್ಲ. ವಿದ್ಯಾ ಇಲಾಖೆಯಲ್ಲಿ ಇಷ್ಟು ವರ್ಷ ಲೆಕ್ಚರರ್ ಆಗಿದ್ದರೆ ಬಡ್ತಿ ಕೊಡಬೇಕೆಂದು ಹಿಂದೆ ಆದೇಶ ಕೊಟ್ಟಿದ್ದಾರೆ. ಹೆಚ್ಚಿಗೆ ಪೋಸ್ಟ್ಸ್ ಕ್ರಿಯೇಟ್ ಮಾಡುವುದೇನೂ ಇಲ್ಲ. ಇರತಕ್ಕ ಲೆಕ್ಚರರ್ಸ್‌ಗೆ ರೀಡರ್ಸ್ ಎಂದು ಬಡ್ತಿ ಕೊಟ್ಟಿದ್ದಾರೆ. ಆದರೆ ಮಾನ್ಯ ವಿದ್ಯಾ ಸಚಿವರು ಏನು ಉತ್ತರ ಕೊಟ್ಟರು ಆದು ಸರಿಯಲ್ಲ. ಸ್ವಾಮಿ, ನಾನು ತಪ್ಪಿಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಯಾವ ಲೆಕ್ಚರೇ ಆಗಲಿ ೧೫–೨೦ ವರ್ಷಗಳಾದರೂ ಒಂದು ಬಡ್ತಿ ಇಲ್ಲ ಎಂದರೆ ಅವನು ತನ್ನ ಕೆಲಸವನ್ನು ಎಷ್ಟು ಆಸಕ್ತಿಯಿಂದ ಮಾಡುತ್ತಾನೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಅವನ ಮನಸ್ಸು ಸಂತೋಷ ಪಡಬೇಕಾದರೆ ಟೈಂ ಬೌಂಡ್ ಸ್ಕೇಲ್ ಕೊಡಬೇಕು. ಆದರೆ, ಇದನ್ನು ಸರಿಪಡಿಸಲು ಹೋದರೆ ಎಲ್ಲ ಇಲಾಖೆಗಳಲ್ಲೂ ಪೇ ಸ್ಕೇಲ್ ಬದಲಾವಣೆಯಾಗುತ್ತದೆಂದು ತಾವು ಹೇಳುವುದು ಸರಿಯಲ್ಲ.

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮಾತನಾಡುತ್ತಾ ಈ ಬದಲಾವಣೆ ಕೇವಲ ವಿದ್ಯಾ ಇಲಾಖೆಗೆ ಮಾತ್ರ ಸೀಮಿತವಾಗಿದೆ, ಬೇರೆ ಯಾವ ಇಲಾಖೆಯಲ್ಲೂ ಅದನ್ನು ಬದಲಾವಣೆ ಮಾಡುವ ಪ್ರಸಂಗ ಬರುವುದಿಲ್ಲ ಎಂದು ಹೇಳಿದರು. ತಮಗೆ ಒಂದು ಉದಾಹರಣೆ ಹೇಳುವುದಾದರೆ ರೆವಿನ್ಯೂ ಇಲಾಖೆಯಲ್ಲಿ ತಹಸೀಲ್ದಾರರು ಇರುತ್ತಾರೆ. ಅಸಿಸ್ಟೆಂಟ್ ಕಮಿಷನರ್‌ರವರೂ ಇರುತ್ತಾರೆ. ಈಗ ಒಬ್ಬ ವ್ಯಕ್ತಿ ತಹಸೀಲ್ದಾರನಾಗಿ ಕೆಲವು ವರ್ಷ ಕೆಲಸ ಮಾಡಿದ ಮೇಲೆ ಆತನಿಗೆ ಮುಂದಿನ ಬಡ್ತಿ ಕೊಡಬೇಕೆಂದರೆ ಅಸಿಸ್ಟೆಂಟ್ ಕಮಿಷನರ್ ಹುದ್ದೆಯನ್ನು ಕೊಡಬೇಕು. ಆಲ್ಲಿರತಕ್ಕ ಅಸಿಸ್ಟೆಂಟ್ ಕಮಿಷನರ್‌ನ್ನು ಡೆಪ್ಯುಟಿ ಕಮಿಷನರ್ ಹುದ್ದೆಗೆ ಏರಿಸಬೇಕು. ನಾನು ಆಗಲೇ ಹೇಳಿದಂತೆ ಯಾವ ಇಲಾಖೆಯಲ್ಲೇ ಆಗಲಿ ೧೦–೧೫ ವರ್ಷಗಳ ಕಾಲ ಕೆಲಸ ಮಾಡಿದ ಮೇಲೆ ಜಾಸ್ತಿ ಸಂಬಳ ಕೊಡಬೇಕೆಂದರೆ ಅವರಿಗೆ ಎಷ್ಟು ಕೆಲಸ ಇದೆ, ವರ್ಕ್‌ಲೋಡ್ ಎಷ್ಟು ಇದೆ ಎಂಬುದನ್ನು ನೋಡಬೇಕಾಗುತ್ತದೆ. ಅದು ಯಾವುದೂ ಇಲ್ಲದ ಹಾಗೇ ಮಾಡುವುದಕ್ಕೆ ಹೋದರೆ ಒಂದು ದೊಡ್ಡ ಗೊಂದಲವೇ ಉಂಟಾಗುತ್ತದೆ.

ಶ್ರೀ ಪಿ. ರಾಮದೇವ್.—ಸ್ವಾಮಿ, ಇಲಾಖೆಗಳಲ್ಲಿ ಏನೂ ಗೊಂದಲವಾಗುವುದಿಲ್ಲ. ಗೊಂದಲವಾಗಿರುವುದು ತಮ್ಮಲ್ಲೇ ಜಾಸ್ತಿ ಎಂದು ಕಾಣುತ್ತದೆ. ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಿಂದ ನವಂಗೆ ಸಮರ್ಪಕವಾದ ಉತ್ತರವನ್ನು ಕೊಡಿಸಬೇಕು. ಮಾನ್ಯ ಸಚಿವರು ಏನು ಗೊಂದಲವಾಗುತ್ತದೆಂದು ಹೇಳುತ್ತಿದ್ದಾರೆ ಅದನ್ನು ಅವರು ರುಜುವಾತು ಮಾಡಿ ತೋರಿಸಬೇಕು.

ಶ್ರೀ ಜಿ.ಬಿ. ಶಂಕರರಾವ್.—ಮಾನ್ಯ ಅಧ್ಯಕ್ಷರೇ, ನಾರಾಯಣ ಜೈ ಕಮಿಷನ್‌ನವರು ಶಿಫಾರಸು ಮಾಡಿದ್ದ ಸ್ಕೇಲನ್ನು ಆಫೀಸಿಯಲ್‌ಪೇ ಕಮಿಟಿಯವರು ಛೇಂಜ್ ಮಾಡಬೇಕಾಯಿತು. ಅಂದರೆ ಎಲ್ಲಿ ಅವಶ್ಯಕತೆಗಾಗಿ ಬದಲಾವಣೆ ಮಾಡಬೇಕಾಗಿತ್ತೋ ಅಲ್ಲಿ ಮಾಡಿದ್ದೇವೆ. ಪೈ ಕಮಿಷನ್ ಪ್ರಕಾರ ಎಲ್ಲಾ ಬದಲಾವಣೆ ಮಾಡಬೇಕೆಂದರೆ ಪುನಃ ತೊಂದರೆಯಾಗುತ್ತದೆ. ಇನ್ಕ್ರಿಮೆಂಟ್ಸ್ ಗ್ರ್ಯಾಚುಯಿಟಿ ವಿಚಾರದಲ್ಲಿ ಹೇಳುವುದಾದರೆ ನಮಗೆ ಇದರಲ್ಲಿ ಪಕ್ಷಪಾತನದ ಪ್ರವೃತ್ತಿ ಏನೂ ಇಲ್ಲ. ೧೦೦ಕ್ಕೆ ೩ ಪರ್ಸೆಂಟ್ ಗ್ರ್ಯಾಚುಯಿಟಿ ಕೊಡಬೇಕೆಂದು ಹೇಳಿದೆ. ನಾವು ಖಾಸಗಿ ಶಾಲೆಗಳಿಗೆ ಕನಿಷ್ಟ ೧೦೦ಕ್ಕೆ ೯೦ ಪರ್ಸೆಂಟ್‌ನಷ್ಟಾದರೂ ಕೊಡಬೇಕೆಂದು ಮಾಡುತ್ತಿದ್ದೇವೆ. ಇದಕ್ಕಾಗಿ ನಮ್ಮ ನೆರೆ ರಾಜ್ಯಗಳಲ್ಲಿ ಏನು ಕಾನೂನು ಇಟ್ಟುಕೊಂಡಿದ್ದಾರೆಯೆಂಬುದನ್ನು ತರಿಸಿಕೊಂಡು ಯೋಚನೆ ಮಾಡುತ್ತಿದ್ದೇವೆ. ಅಂತೂ ಈ ವಿಚಾರವನ್ನು ನಾವು ತೃಪ್ತಿಕರವಾದ ರೀತಿಯಲ್ಲಿ ಪರಿಹಾರ ಮಾಡಲು ಪ್ರಯತ್ನ ಮಾಡುತ್ತೇವೆ. ಈ ವಿಚಾರವನ್ನು ಸಾಕಷ್ಟು ಆಲೋಚನೆ ಮಾಡಿ ಇಟ್ಟಿದ್ದೇವೆ.ಕ ನಾನು ಎಲ್ಲವನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದೇನೆ. ಇದರ ಜೊತೆಗೆ ರಾಜ್ಯದ ಆರ್ಥಿಕಪರಿಸ್ಥಿತಿಯನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ಆದರೆ ತಾವು ಈ ವಿಚಾರ ಇವತ್ತೇ ಇತ್ಯರ್ಥವಾಗಬೆತಿಂದು ಹೇಳುತ್ತಿದ್ದೀರಿ. ನಾವು ಶಿಕ್ಷಕರನ್ನು ಕರೆಸಿಕೊಂಡು ಮಾತನಾಡುವಾಗ ನಿಮ್ಮ ಪಟವ ಪುಸ್ತೋವ್ಯೆಯನ್ನು ಬಿಟ್ಟು ಕೆಲಸಮಾಡಿ, ಈಗ ನೀವು ಸಹಕರಿಸದೇ ಹೋದರೆ ಪರೀಕ್ಷೆ ಹತ್ತಿರ ಬರುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆಂದು ಹೇಳಿದ್ದೇವೆ. ಈ ಶಿಕ್ಷಕರಿಗೆ ಎಂದೂ ಸಿಕ್ಕದೇ ಇರುವ ಅನುಕೂಲ ಸಿಕ್ಕಿರುವುದರಿಂದ ಅವರೂ ಕೂಡ ನಾವು ಹೇಳಿದ್ದನ್ನು ಒಪ್ಪಿಕೊಂಡಿದ್ದಾರೆ. ಮಾನ್ಯ ಪೊಮ್ಮಾಯಿಯವರು ಡಿಸೆಂಬರ್ ತಿಂಗಳಿನೊಳಗೆ ಪ್ರಯತ್ನ ಮಾಡುತ್ತೀರಾ ಎಂದು ಕೇಳಿದ್ದರು. ಡಿಸೆಂಬರ್ ತಿಂಗಳು ಮುಗಿಯುವುದರೊಳಗೆ ನಾನು ಎರಡು ಸಾರಿ ಬಾಸಗಿ ಹಾಗೂ ಪ್ರೌಢಶಾಲೆಗಳಲ್ಲಿ ಕೆಲಸಮಾಡುತ್ತಿರುವ ಶಿಕ್ಷಕರನ್ನು ಕರೆಸಿ ಮಾತನಾಡಿದ್ದೇನೆ. ಈ ದಿಶೆಯಲ್ಲಿ ಸರ್ಕಾರಿ ಆಜ್ಞೆಯನ್ನು ಏನು ಹೊರಡಿಸಿದ್ದಾರೆ, ಆದರಲ್ಲಿ ಹಣಕಾಸಿನ ಪರಿಸ್ಥಿತಿಯನ್ನು ಕುರಿತು ಮಾತನಾಡಿಲ್ಲ ಎನ್ನುವ ಮಾತು ಸರಿಯಿಲ್ಲ. ಮಾನ್ಯ ಲಕ್ಷ್ಮೀಸಾಗರ್‌ರವರು ಮಾತನಾಡುತ್ತಾ ಈಗಿರ

ತಕ್ಕಂಥ ಪೇಸ್ಕೇಲ್ ಬಹಳ ವರ್ಸ್ಟ್ ಆಗಿದೆ ಎಂದು ಹೇಳಿದರು. ಹಿಂದಿನ ಸರ್ಕಾರದ ವೇತನ ಶ್ರೇಣಿಗೂ ಈಗಿನ ಸರ್ಕಾರದ ವೇತನ ಶ್ರೇಣಿಗೂ ಹೋಲಿಸಿ ನೋಡಿದರೆ ಇದು ಬಹಳ ಚೆನ್ನಾಗಿ ಇದೆ ಏನು ಎಲ್ಲರೂ ಹೇಳುತ್ತಾರೆ. ಕೇಂದ್ರ ಸರ್ಕಾರದವರೂ ಕೂಡ ಮೇಲಿಂದ ಮೇಲೆ, ಹಂತ ಹಂತವಾಗಿ ಬಡ್ತಿ ಕೊಡ ತಕ್ಕಂಥಾದ್ದನ್ನು ಹಾಗೆಯೇ ಇಟ್ಟಿದ್ದಾರೆ. ಬಡ್ತಿಯನ್ನು ಸೇರಿಸಿ ವೇತನ ಶ್ರೇಣಿಯನ್ನು ನಿಗದಿ ಮಾಡಿರ ತಕ್ಕಂಥಾದ್ದು ಬಹಳ ಚೆನ್ನಾಗಿರುತ್ತದೆ. ಆದ್ದರಿಂದ ತಾವು ಹೇಳತಕ್ಕಂಥ ಮಾತು ಮಗು ಅತ್ತರೆ ಹಾಲು ಸಿಗುತ್ತದೆ ಇಲ್ಲದಿದ್ದರೆ ಇಲ್ಲ ಎನ್ನುವುದು ಸತ್ಯಕ್ಕೆ ದೂರವಾದ ಮಾತು. ಯಾವುದಕ್ಕೂ ಒಂದು ಲಿಮಿಟ್ ಇರುತ್ತದೆ, ಹಾಲು ಸಿಗುತ್ತದೆಂದು ಕೆಚ್ಚೆ ನ್ನೇ ಕೊಯ್ಯುವುದರಿಂದ ಏನೂ ಪ್ರಯೋಜನವಾಗು ವುದಿಲ್ಲ. ಇದು ತಮಗೂ ಗೊತ್ತಿರತಕ್ಕಂಥ ವಿಷಯ. ಈ ರೀತಿ ಮಾಡಬಾರದೆಂದು ತಾವೂ ಕೂಡ ಹೇಳಬೇಕು.

ಶ್ರೀ ರಮೇಶ್ ಕುಮಾರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಇಲ್ಲಿ ಕೆಲವಾರು ವಿಚಾರ ಗಳನ್ನು ಪ್ರಸ್ತಾಪ ಮಾಡಿದರು. ಉಪಾಧ್ಯಾಯರುಗಳು ಏನು ಬೇಡಿಕೆಗಳನ್ನು ಇಟ್ಟಿರುತ್ತಾರೆ ಅದು ಬಹಳ ಗಮನಿಸತಕ್ಕಂಥ ಬೇಡಿಕೆಗಳಾಗಿರುತ್ತವೆ. ಅವರು ಪರೀಕ್ಷೆಗಳಿಗೆ ಹೋಗುವುದಕ್ಕೆ ಬಹಿಷ್ಕರಿಸಿದರೆ ಅದಕ್ಕೆ ಪರ್ಯಾಯ ವ್ಯವಸ್ಥೆಯನ್ನು ಏನು ಮಾಡುತ್ತೀರಿ? ಯಾವ ಪರ್ಯಾಯ ವ್ಯವಸ್ಥೆಯನ್ನು ಮಾಡದಿದ್ದರೆ ವಿದ್ಯಾರ್ಥಿಗಳ ಭವಿಷ್ಯ ಏನಾಗುತ್ತದೆ ಎಂಬುದರ ಬಗ್ಗೆ ತಾವು ಯೋಚನೆ ಮಾಡಿ, ನಮಗೆ ಸಮಾಧಾನಕರವಾದ ಉತ್ತರವನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಜಿ.ಬಿ. ಶಂಕರರಾವ್.—ಈಗ ಪರೀಕ್ಷೆಗಳನ್ನು ನಡೆಸಲಿಕ್ಕೆ ತಯಾರಿಲ್ಲವೆಂದು ಶಿಕ್ಷಕರು ಹಠ ಮಾಡಿದರೆ ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಲೇಬೇಕಾಗುತ್ತದೆ. ವ್ಯವಸ್ಥೆ ಮಾಡಬಾರದು ಎಂದು ಇಲ್ಲ ಶಿಕ್ಷಕವರ್ಗದವರನ್ನೂ ಪ್ರಾರ್ಥಿಸಿಕೊಳ್ಳುತ್ತೇವೆ ಆ ರೀತಿ ಕೆಲಸಕ್ಕೆ ಹೋಗಬಾರದೆಂದು.

ಶ್ರೀ ಎಂ.ಸಿ. ನಾನಯ್ಯ.—ಹೋದರೆ ಏನು ಮಾಡುತ್ತೀರಿ?

ಶ್ರೀ ಜಿ. ಬಿ. ಶಂಕರರಾವ್.—ಹೋದರೆ ವ್ಯವಸ್ಥೆ ಮಾಡಬೇಕಾಗುತ್ತದೆ. ಏತಕ್ಕೆಂದರೆ ಅವರ ಮಕ್ಕಳೂ ಸಹ ಇರುತ್ತಾರೆ.

ಶ್ರೀ ಪಿ. ರಾಮ್‌ದೇವ್.—ಕ್ಯಾಲೆಂಡರ್ ಫಾರ್ ಎಕ್ಸಾಮಿನೇಷನ್ ಅದನ್ನು ಕೂಡ ಇಲ್ಲಿಯವರೆಗೆ ಕೊಟ್ಟಿಲ್ಲ. ಅದನ್ನು ಬೇಗನೆ ಕಳುಹಿಸುವ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಜಿ.ಬಿ. ಶಂಕರರಾವ್.—ಅದನ್ನು ಮಾಡುತ್ತೇವೆ, ಮತ್ತು ಬೇರೆ ವ್ಯವಸ್ಥೆ ಮಾಡುವ ಮಟ್ಟಕೆ ಪರಿಸ್ಥಿತಿ ಹೋಗುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

SRI M.C. NANAIAH.—We will become invigilators.

ಶ್ರೀ ಜಿ.ಬಿ. ಶಂಕರರಾವ್.—ಸ್ವಾಮಿ, ಶ್ರೀ ಪುಟ್ಟಯ್ಯರ್ ಆನಂದರಾವ್ ಹೇಳಿದ ಹಾಗೆ ಈ ವೇತನ ಶ್ರೇಣಿಯ ಸಮಸ್ಯೆ, ಶ್ರೀ ನಾರಾಯಣ ಪೈ ಕಮಿಷನ್ ಬಂದಮೇಲೆ ಬಂದಿತು. ಹಿಂದೆ ಇದ್ದ ಸಮಸ್ಯೆ ಗಳ ಜೊತೆಗೆ ಹೊಸ ಸಮಸ್ಯೆಗಳೂ ಸೇರಿಕೊಂಡು ಬಂದಿವೆ. ಹತ್ತಾರು ವರ್ಷಗಳಿಂದ ಇದ್ದ ಸಮಸ್ಯೆಗಳ ಜೊತೆಗೆ ಕೆಲವು ಹೊಸ ಸಮಸ್ಯೆಗಳು ಬಂದಿರುತ್ತವೆ. ಇದಕ್ಕೆ ಪರಿಹಾರ ಕಂಡುಹಿಡಿಯಲು ಸರ್ಕಾರ ತನ್ನ ನೀತಿಯ ಚೌಕಟ್ಟಿನಲ್ಲಿ ಪ್ರಯತ್ನ ಮಾಡುತ್ತಿದೆ. ಈ ವಿಚಾರದಲ್ಲಿ ನೀತಿಯ ಚೌಕಟ್ಟು ಬಿಟ್ಟು ಹೋಗಿಲ್ಲ. ಮಾನ್ಯ ರಾಮ್‌ದೇವ್‌ರವರು, ನಾನು ಅಸಮರ್ಥ, ಸಮರ್ಥನಲ್ಲವೆಂದು ಹೇಳಿದರು. ಆ ರೀತಿ ಹೇಳಿದರೆ ಇನ್ನು ಯಾವ ರೀತಿ ಸಾಮರ್ಥ್ಯವನ್ನು ತೋರಿಸಬೇಕಾಗಿತ್ತು ಎಂದು ಕೇಳುತ್ತೇನೆ.

ಅಧ್ಯಕ್ಷರು.—ಅದರ ಬಗ್ಗೆ ಮಾತನಾಡುವುದು ಬೇಡ ಬಿಡಿ.

SRI M.C. NANAIAH.—I think the Hon'ble Minister is really efficient. If it is so he must prove that he is not inefficient.

ಶ್ರೀ ಜಿ.ಬಿ. ಶಂಕರರಾವ್.—ಮಾನ್ಯ ಸದಸ್ಯರು ಹೇಳಿದಕ್ಕೆ ಹೇಳುವುದಾದರೆ ನಾನು ಅಸಮರ್ಥ ಎಂದರೆ ಖಜಾನೆಯ ದುಡ್ಡನ್ನೆಲ್ಲ ಕೊಟ್ಟಿದ್ದರೆ ನಾನು ಸಮರ್ಥನಾಗುತ್ತಿದ್ದೆ ಎಂದು ಅರ್ಥವೇ? ಖಜಾನೆಯ ದುಡ್ಡನ್ನೆಲ್ಲ ಕೊಡುವುದಕ್ಕೆ ಅದು ನನ್ನದಲ್ಲ. ಸಾರ್ವಜನಿಕರ ದುಡ್ಡು. ಅದನ್ನು ಖರ್ಚು

ಮಾಡಬೇಕಾದರೂ ಪ್ರಾಮಾಣಿಕವಾಗಿ ಖರ್ಚು ಮಾಡಬೇಕಾಗಿದೆ. ಅವರು ಮತ್ತೊಂದು ಮಾತನ್ನು ಹೇಳುತ್ತಾ ಪ್ರಮೋಷನ್ ಕೊಟ್ಟುಬಿಡಿ ಎಂದು ಹೇಳಿದರು. ಪ್ರಮೋಷನ್ ಕೊಟ್ಟುಬಿಟ್ಟರೆ ಶಿಕ್ಷಕರಿಗೆ ಪರಿಹಾರ ಕೊಟ್ಟಂತಾಗುತ್ತದೆಯೇ?

ಅಧ್ಯಕ್ಷರು.—ಅವರ ಉದ್ದೇಶವಾದರೂ ಇಷ್ಟೇ ಮಾರ್ಚ್. ಏಪ್ರಿಲ್ ಹತ್ತಿರಕ್ಕೆ ಬರುತ್ತಿದೆ. ಪ್ರಶ್ನೆಪತ್ರಿಕೆಗಳು ಇಷ್ಟು ಹೊತ್ತಿಗೆ ಆಚ್ಚಾಗಬೇಕಾಗಿತ್ತು. ತಡವಾಗಿ ಪರಿಸ್ಥಿತಿ ಆ ಮಟ್ಟಕ್ಕೆ ಬಂದರೆ ಏನು ಮಾಡುವುದು ಎನ್ನುವುದೇ ಅವರ ಪ್ರಶ್ನೆಯಾಗಿರುತ್ತದೆ. ಆದಕ್ಕೆ ಬದಲಿ ವ್ಯವಸ್ಥೆಯನ್ನೇನಾದರೂ ಮಾಡಿ ಇಟ್ಟುಕೊಂಡಿರುತ್ತಾರಾ ಎಂದು ಕೇಳುತ್ತಿದ್ದಾರೆ.

ಶ್ರೀ ಜಿ.ಬಿ. ಶಂಕರರಾವ್.—ಅದಕ್ಕೆ ಬದಲಿ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ ಮತ್ತು ಪ್ರಮೋಷನ್ ಕೊಟ್ಟುಬಿಡಿ ಎಂದು ಹೇಳಿದರೆ ಪರೀಕ್ಷೆಯ ವ್ಯವಸ್ಥೆಯನ್ನಾದರೂ ಏತಕ್ಕೆ ಮಾಡಬೇಕು?

I am not confused. Hon.Member Sri Ramdev cannot pass such remarks. He has something in mind and he has expressed it. If I don't concede that does it mean that I am confused? It is not so.

MR. SPEAKER —Please continue your say in the matter. We have got to take up other subjects in the agenda.

SRI A. LAKSHMISAGAR.—Sir, I fully agree that the business listed in the agenda for today has to be taken up. But this is a burning issue. The Hon'ble Minister for Education doesn't seem to have realised the seriousness of the situation in which he has landed himself and creating problems for all the parents. Their demands have been reduced to four. Now, the first objection is, there will be heavy cost in case these demands are accepted and therefore the financial implications arising out of it has to be worked out. What is the financial implications? What is the exact amount that is likely tobe incurred by the State Government if these demands are accepted. The Hon'ble Minister has not gone into them. I am really not able to understand what he says about the teacher's demands. He says that he was a teacher and knows the problems. Sir, I must say with all emphasis at my command to my colleagues and to the entire teaching fraternity, not to go on strike. Therefore, I appeal to the Government to concede there legitimate demands. The teachers have been very sensible, decent and they have conducted themselves in a very constitutional and diciplined manner. But the manner in which the replies given by the Hou'ble Minister for Education, doesn't seem to have any impact or is not going to solve the problem. Sir, these are accepted principles. There is a pay revision for Government employees It is so in the case of industrial workers; banking employees; LIC Staff Likewise these poor teachers have been asking for a revision of pay scales. But the Government has not been able to solve their problems.

SRI G. B. SHANKAR RAO.—What I said was under the present situation it is not easy and therefore said it may take a little more time. The matter is being examined.

SRI A. LAKSHMISAGAR.—If it is so, let the Hon'ble Minister tell us whether the Government is going to concede their demands or not. Let us have some idea about it.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಅಧ್ಯಕ್ಷರೇ, ನಾನು ಈ ಸಂದರ್ಭದಲ್ಲಿ ಒಂದು ಸಲಹೆ ಮಾಡುವುದಕ್ಕೆ ಇಚ್ಛಿಪಡುತ್ತೇನೆ. ಅದನ್ನು ಮಾನ್ಯ ವಿದ್ಯಾ ಸಚಿವರು ಒಪಿ ಕೊಳ್ಳುತ್ತಾರೆಂದು ಭಾವಿಸುತ್ತೇನೆ. ಈಗ ಏನಾ ನಿಲುವಳಿ ಸೂಚನೆಯನ್ನು ಕೊಟ್ಟಿರುತ್ತಾರೆ ಅದರ ಬಗ್ಗೆ ಅಮೂಲಾಗ್ರವಾಗಿ ಚರ್ಚೆ ಮಾಡಬೇಕಾಗಿರುತ್ತದೆ. ಈಗ ಅದರ ಬಗ್ಗೆ ಚರ್ಚೆ ಮಾಡಲು ಸಮಯದ ಅಭಾವವಿದೆ, ಏತಕ್ಕೆಂದರೆ ಮಾನ್ಯ ಸದಸ್ಯರಿಗೆ ಎಷ್ಟರವರೆಗೆ ಕಳಕಳಿ ಇರುತ್ತದೋ ಅದಕ್ಕಿಂತ ಹೆಚ್ಚಿನ ಕಳಕಳಿ ನನಗೂ ಇರುತ್ತದೆ. ಇದಕ್ಕೆ ಎಷ್ಟು ಸಮಯವನ್ನು ಕೊಟ್ಟರೂ ಕೂಡ ಈ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲ ಆದ್ದರಿಂದ ನಾನು ಸಲಹೆ ಮಾಡುವುದೇನೆಂದರೆ–

ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಸಚಿವರ ನೇತೃತ್ವದಲ್ಲಿ ನಾಳೆ, ನಾಡದ್ದರಲ್ಲಿ ಮೇಲಿನ ಮನೆಯ ಸದಸ್ಯರು ಹಾಗೂ ಶಿಕ್ಷಣದ ವಿಷಯದಲ್ಲಿ ಆಸಕ್ತಿ ಇರತಕ್ಕಂತಹ ಸದಸ್ಯರನ್ನೊಳಗೊಂಡ ಒಂದು ಸಭೆಯನ್ನು ಕರೆದು ವಿವರವಾಗಿ ಅದರ ಬಗ್ಗೆ ಚರ್ಚೆ ಮಾಡಿ ಒಂದು ನಿರ್ಣಯಕ್ಕೆ ಬರಬಹುದು.

ಶ್ರೀ ಎಂ. ಸಿ, ನಾನಯ್ಯ.—ಈ ವಿಷಯವನ್ನು ಇನ್ನೂ ಎರಡೂವರೆ, ಮೂರು ಗಂಟೆಯಾದರೂ ಬಗೆಹರಿಸುವುದಕ್ಕಾಗುವುದಿಲ್ಲವೆಂದು ಮಾನ್ಯ ಸದಸ್ಯರಾದ ಶ್ರೀ ಮಳ್ಳೂರು ಆನಂದರಾಯರು ಹೇಳುತ್ತಿದ್ದಾರೆ. This is the statement given by his own partyman.

ಶ್ರೀ ಮಳ್ಳೂರು ಆನಂದರಾವ್.—ನಾನು ಹೇಳಿದ್ದನ್ನು ಮಾನ್ಯ ಸದಸ್ಯರು ಬಹಳ ಬುದ್ಧಿವಂತಿಕೆಯಿಂದ ತಿರುಗಿಸಿ ಹೇಳುತ್ತಿದ್ದಾರೆ. ನಾನು ಇದು ಮಂಹತ್ವದ ವಿಷಯ ಆಗಿರುವುದರಿಂದ ಗಮನಸೆಳೆಯುವ ಸೂಚನೆಯಲ್ಲಿ ಈ ಬಗ್ಗೆ ವಿವರವಾಗಿ ಚರ್ಚೆ ಮಾಡುವುದಕ್ಕೆ ಸಮಯಾವಕಾಶ ಇಲ್ಲ ಎಂದು ಹೇಳಿದೆ.

ಅಧ್ಯಕ್ಷರು.—ಗಮನ ಸೆಳೆಯುವ ಸೂಚನೆಯನ್ನು ೧೦-೦೫ ನಿಮಿಷಗಳಲ್ಲಿ ಮುಗಿಸಬೇಕಾಗುತ್ತದೆ. ಇಲ್ಲಿ ನಾವು ಈ ಬಗ್ಗೆ ಸಾಕಷ್ಟು ಕಾಲವನ್ನು ತೆಗೆದುಕೊಂಡಿದ್ದೇವೆ. ಮಾನ್ಯ ಲಕ್ಷ್ಮೀಸಾಗರ್ ಅವರು ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ಎಷ್ಟು ದಿನ ಬೇಕೆಂದು ಕೇಳುತ್ತಿದ್ದಾರೆ. ಈ ಬಗ್ಗೆ ಮಾನ್ಯ ಶಿಕ್ಷಣ ಮಂತ್ರಿ ತಕ್ಷಣ ಏನಾದರೂ ಉತ್ತರ ಕೊಡುವುದಿದ್ದರೆ ಕೊಡಲಿ, ಇಲ್ಲದಿದ್ದರೆ ಇಷ್ಟು ದಿನ ಬೇಕೆಂದು ಹೇಳಲಿ ಇನ್ನೊಂದು ದಿನ ಈ ಬಗ್ಗೆ ಮಾನ್ಯ ಮಂತ್ರಿಯವರು ಹೇಳಿಕೆ ಕೊಡುವುದಿದ್ದರೆ .....

ಶ್ರೀ ಎ. ಲಕ್ಷ್ಮೀಸಾಗರ್.—ಆಗುವುದಿಲ್ಲ ಸ್ವಾಮಿ. ಇವತ್ತೇ ಏನಾದರೂ ಒಂದು ನ್ಯಾಯವಾದ ರೀತಿಯಲ್ಲಿ ಸರ್ಕಾರ ನಡೆದುಕೊಳ್ಳುತ್ತದೆಂದು, ಇಷ್ಟು ದಿನಗಳಲ್ಲಿ ಶಾಲಾ ಉಪಾಧ್ಯಾಯರ ಬೇಡಿಕೆಗಳನ್ನು ಪರಿಶೀಲನೆ ಮಾಡುತ್ತೇನೆ ಎನ್ನುವ ಆಶ್ವಾಸನೆಯನ್ನು ಈ ಅಧಿವೇಶನದಲ್ಲಿ ಮಾನ್ಯ ವಿದ್ಯಾಮಂತ್ರಿಯವರು ಕೊಡದೇ ಹೋದರೆ ಪರಿಸ್ಥಿತಿ ನೆಟ್ಟಗಾಗುವುದಿಲ್ಲ.

ಅಧ್ಯಕ್ಷರು.—ಹಾಗೆಂದರೆ ಹೇಗೆ ?

ಶ್ರೀ ಎ. ಲಕ್ಷೀಸಾಗರ್.—ನಾನು ನನ್ನ ಅಭಿಪ್ರಾಯವನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಹೀಗೇ ಮಾಡಬೇಕು, ಹಾಗೇ ಮಾಡಬೇಕು ಎಂದು ಹೇಳುವುದಕ್ಕಲ್ಲ ನೀವು ಇರುವುದು ! If you go on yielding like this.....

SRI G. B. SHANKAR RAO.—What can I do Sir ? My learned friends did not understand me. Before knowing, all of them got up and were speaking simultaneously. So, in the interest of the House, I request my learned friends to be patience in hearing me first. Afterwards, let them say whatever they want to.

ಅಧ್ಯಕ್ಷರು.—ತಾವು ವಿಷಯವನ್ನು ಪ್ರಸ್ತಾಪ ಮಾಡಿ.

ಶ್ರೀ ಜಿ. ಬಿ. ಶಂಕರ್‌ರಾವ್.—ಮಾನ್ಯ ಸದಸ್ಯರು ಪೇ ರಿವಿಜನ್ ಮೇಲಿಂದ ಮೇಲೆ ಆಗುತ್ತದೆ ಎಂದು ಹೇಳಿದರು. ಪೇ ರಿವಿಜನ್ ನಾಲ್ಕು ಐದು ವರ್ಷಕ್ಕೆ ಒಂದು ಬಾರಿಯಂತಾಗುತ್ತದೆ. ಮೊನ್ನೆ ಮೊನ್ನೆ ತಾನೇ ಪೇ ರಿವಿಜನ್ ಆಗಿದೆ. ಒಂದು ತಿಂಗಳು ಎರಡು ತಿಂಗಳುಗಳಲ್ಲಿ ಪೇ ರಿವಿಜನ್ ಮಾಡುವುದ ಕ್ಕಾಗುವುದಿಲ್ಲ. ಇದನ್ನು ಧೀರ್ಘವಾಗಿ ಚರ್ಚೆ ಮಾಡತಕ್ಕದಿದೆ. ಇದನ್ನು ಧೀರ್ಘವಾಗಿ ಪರಿಶೀಲನೆ ಮಾಡಬೇಕಾಗುತ್ತದೆ. I have got an open mind for discussion. If the hon. members are willing, I request them to come and discuss with me. Its repercusions may run into crores.

SRI P. RAMDEV,—Mr. Speaker Sir,

MR. SPEAKAR.—Mr. Ramdev, you should take my permission to intervene. You cannot just get up and intervene in this way. ದಯವಿಟ್ಟು ಕುಳಿತುಕೊಳ್ಳಿ, ಈ ವಿಷಯಕ್ಕೆ ಸಮಯ ಜಾಸ್ತಿ ತೆಗೆದು ಕೊಂಡಿದ್ದೇವೆ.

ಶ್ರೀ ಪಿ. ರಾಮ್‌ದೇವ್.—ನನಗೆ ಮಕ್ಕಳು ಇವೆ ಸ್ವಾಮಿ.

ಅಧ್ಯಕ್ಷರು, ನನಗೆ ಮಕ್ಕಳು ಇಲ್ಲವೇ ? ಶ್ರೀ ಲಕ್ಷ್ಮೀಸಾಗರ್‌ರವರ ಮಕ್ಕಳು ಇಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ್.—ನನಗೆ ಸ್ವಂತ ಮಕ್ಕಳು ಇಲ್ಲದಿದ್ದರೂ ಮಕ್ಕಳನ್ನು ವಿದ್ಯಾವಂತ ರನ್ನಾಗಿ ಮಾಡುವ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೇನೆ ಸ್ವಾಮಿ.

MR. SPEAKAR.—You have taken sufficient time under Rule 63 ಮಾನ್ಯ ಮಂತ್ರಿಗಳು ತಮ್ಮ ಅಭಿಪ್ರಾಯವನ್ನು ಹೇಳಬಹುದು.

ಶ್ರೀ ಜಿ. ಬಿ. ಶಂಕರ್‌ರಾವ್. ಮಾನ್ಯ ಸದಸ್ಯರಿಗೆ ಒಪ್ಪಿಗೆಯಾದರೆ.....

ಅಧ್ಯಕ್ಷರು.—ಎಲ್ಲಿ ಒಪ್ಪಿಗೆಯಾಗುತ್ತದೆ ?

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರು ನನ್ನ ಜೊತೆ ಚರ್ಚೆ ಮಾಡಬೇಕೆಂದು ಒಂದು ದಿವಸ ಚರ್ಚೆಗೆ ಕಾಲ ನಿಗದಿಮಾಡಲಿ, ಅವರು ಬಂದು ಚರ್ಚೆ ಮಾಡಲಿ. ಆಗ ಅವರಿಗೆ ಅರ್ಥ ಆಗುತ್ತದೆ.

SRI A. LAKSHMI SAGAR.—Sir, my submission is that, within one one week from to-day, the hon. Minister for Educati convene a meeting consisting of members from both the Houses.

ಅಧ್ಯಕ್ಷರು.—ವಿಧಾನಮಂಡಲದ ಎಲ್ಲಾ ಸದಸ್ಯರನ್ನೂ ಕರೆಸಬೇಕೇ? How can that be?

SRI A. LAKSHM SAGAR.—Sir, the number of Legislators to be invited to the meeting is a matter left to the discretion of the Hon. Minister. He must also invite the representatives of the Federation of University and College Teachers" Association.

ಶ್ರೀ ಜಿ. ಬಿ. ಶಂಕರ್‌ರಾವ್.—ನಾನು ಉಪಾಧ್ಯಾಯರ ಮುಖಂಡರನ್ನು ಕರೆಸಿ ಮಾತನಾಡಿದ್ದೇನೆ.

ಅಧ್ಯಕ್ಷರು.—ವಿಧಾನಸಭೆಯ ೨೨೫ ಸದಸ್ಯರು ಹಾಗೂ ವಿಧಾನ ಪರಿಷತ್ತಿನ ೬೩ ಸದಸ್ಯರನ್ನೆಲ್ಲಾ ಕರೆದು ಮಾತನಾಡುವುದಕ್ಕಾಗುತ್ತದೆಯೇ ವಿವಿಧ ರಾಜಕೀಯ ಪಕ್ಷಗಳ ಮುಖಂಡರುಗಳನ್ನು ಕರೆಸಿ ಮಾತನಾಡಬಹುದು. That type of meeting cannot be done.

SRI A. LAKSHMI SAGAR.—Anyway, the Hon. Minister should assure me to convene a meeting within one week.

ಶ್ರೀ ಜಿ. ಬಿ. ಶಂಕರ್‌ರಾವ್.—ಆಗಬಹುದು.

SRI V. B. BHAVI.—Mr. Speaker sir, I am also party to the cal attention motion, I am very sorry to say that I have not received any reply from the Hon. Minister to my problem. Sir, the representatives of the teaching staff had a discussion with the Hon. Chief Minister and also the Hon. Minister for Education. I would like to know from the Hon. Minister for Education, whether the consent was accorded to the following four points, namaly :

1) A starting salary of Rs. 820/- with effect from 1977, for the Lecturers in the Post Graduate Departments of the Universities

2) The extention of the previous G. O, about HRA and CCA to the private aided colleges

3) Raising the emoluments of the Lecturers of the Colleges of Education to the level of the pay of the Arts and Science College Teachers and

4) The rules of promotion for private Aided Colleges.

I have reliably learnt from the representatives of the teaching staff that the Hon. Chief Minister has agreed to the above stated four demands putforth by the Federation.

ಶ್ರೀ ಜಿ. ಬಿ. ಶಂಕರ್‌ರಾವ್.—ಮಾನ್ಯ ಸದಸ್ಯರು ಹೊರಗೆ ಇದ್ದವರು, ಅವರು ಕಲ ನೆ ಮಾಡಿ ಹೇಳುತ್ತಿದ್ದಾರೆಂದು ನಾನು ಹೇಳುತ್ತೇನೆ.

SRI V. B. BHAVI.—Sir, this is highly objectionable. ಮಾನ್ಯ ಮಂತ್ರಿಗಳಿಗೆ ಎಷ್ಟು ಘನತೆ ಗೌರವ ಇದೆಯೋ ಅಷ್ಟೇ ನನಗೂ ಇದೆ.

ಅಧ್ಯಕ್ಷರು.—ನಾನು ಆದನ್ನು ಒಪ್ಪುತ್ತೇನೆ.

ಶ್ರೀ ವಿ. ಬಿ. ಭಾವಿ.—ಎಲ್ಲಾ ಜನರು ಸೇರಿ ಈ ಬೇಡಿಕೆಗಳಿಗೆ ತಮ್ಮ ಸಮ್ಮತಿಯನ್ನು ಸೂಚಿಸಿದ್ದೇವೆಂದು ಹೇಳಿದರೆಂದು ಅವರು ಹೇಳಿದ್ದಾರೆ ಸ್ವಾಮಿ.

ಶ್ರೀ ಜಿ. ಬಿ. ಶಂಕರ್‌ರಾವ್.—ಚರ್ಚಾ ಸಮಯದಲ್ಲಿ ನಾನು ಇದ್ದೆ ಸ್ವಾಮಿ. It is said outside. ಆಗ ಚರ್ಚೆಗೆ ಯಾರು ಯಾರು ಬಂದಿದ್ದರು ಎಂಬುದನ್ನು ಅವರನ್ನೇ ಕೇಳಿ.

ಶ್ರೀ ಎಂ. ಚಂದ್ರಶೇಖರ್.—ತಂದೆತಾಯಿಗಳಿಗೆ, ಪೋಷಕರಿಗೆ ಸಮಾಧಾನ ಆಗುವ ಹಾಗೆ ಈ ವರ್ಷ ಕಾಲಕ್ಕೆ ಸರಿಯಾಗಿ ಪರೀಕ್ಷೆಗಳನ್ನು ನಡೆಸುತ್ತೀರಾ ? ಈ ಬಗ್ಗೆ ದಿಟ್ಟವಾದ ತೀರ್ಮಾನವನ್ನು ತೆಗೆದ ಕೊಳ್ಳುತ್ತೀರಾ ?

ಶ್ರೀ ಜಿ. ಬಿ. ಶಂಕರ್‌ರಾವ್.—ಈ ವರ್ಷ ಕಾಲಕ್ಕೆ ಸರಿಯಾಗಿ ಪರೀಕ್ಷೆಯನ್ನು ನಡೆಸುವುದಕ್ಕೆ ಹಿಂಜರಿಯುವುದಿಲ್ಲ. ಈ ಬಗ್ಗೆ ತಕ್ಕ ಕಾರ್ಯಕ್ರಮ ಕೈಗೊಳ್ಳುತ್ತೇವೆ ಎಂದು ನಾನು ಈ ಮೂಲಕ ಸದನಕ್ಕೆ ತಿಳಿಸಲು ಇಷ್ಟಪಡುತ್ತೇನೆ.

ಶ್ರೀ ಯು. ಬಿ. ಬೋರ್ಕರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಿತ್ರರಾದಂತ ಶ್ರೀ ವಿ ಬಿ. ಭಾವಿಯವರು ಮಾತನಾಡುವಾಗ ಅವರು ಸುಳ್ಳು ಹೇಳಿದರು ಅನ್ನುವ ಒಂದು ಮಾತನ್ನು ಹೇಳಿದರು. ಆ ಶಬ್ದ ಅನ್‌ಪಾರ್ಲಿಮೆಂಟರಿಯಾಗುತ್ತದೆ. ದಯವಿಟ್ಟು ಆ ಶಬ್ದವನ್ನು ವರದಿಯಿಂದ ತೆಗೆಯಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು.—ಅವರು ಸುಳ್ಳು ಎಂದು ಹೇಳುವ ಶಬ್ದ ನನಗೆ ಕೇಳಿಸಲಿಲ್ಲಾ. ನಾನು ರೆಕಾರ್ಡ್ ತೆಗೆಸಿ ನೋಡುತ್ತೇನೆ. ಒಂದು ವೇಳೆ ಆ ಶಬ್ದ ಮಾನ್ಯ ಸದಸ್ಯರು ಬಳಸಿದ್ದರೆ ಆ ಶಬ್ದವನ್ನು ತೆಗೆಸಿ ಹಾಕಿಸೋಣ.

(ii) re: Stopping of Holding Examination by Gulbarga University for the year 1981—82

SRI PRABHAKER TELKAR.—Sir, I call the attention of the Minister for Education regarding the stopping of holding examination by Gulbarga University for the year 1981-82.

SRI G. B. SHANKAR RAO (Minister for Education).—The Gulbarga University was started in September 1980. The decision of the Gulbarga University not to conduct the examinations during 1981-82 arises from the fact that the university is still very new and is in the process of building up the requisite facilities for the conduct of examinations. The university at present does not have a full fledged examination centre which is required for the purpose of conduct of examinations. As examinations are very important, great care and attention has to be given for the conduct of the same. The university does not as yet have the full complement of staff required for the conduct of the examinations. Government and the university have received representations from students coming within the jurisdiction of the Gulbarga University to have the examinations conducted by the Karnataka University, Dharwad. Section 74 of the Karnataka State Universities Act provides for the conduct of examinations by the older university until such time as the new university is in a position to conduct the same. The Vice-Chancellor of the Gulbarga University keeping these factors in mind has decided to have the examination conducted by the Karnataka University, Dharwad, which has the required personnel and facilities for the smooth conduct of the examinations.

SRI PRABHAKAR TELKAR.—Sir, in the Gulbarga University the Post Graduation centre was established in the year 1970 and to say that there is no staff or other facilities to hold the examinations does not hold good. I think in the month of September 1980 itself the Mangalore University has come into existence and on the same day as the Gulbarga University has come into existence. There is no difficulty in the Mangalore University to the examinations. When the Chancellor of the University, the Governor of Karnataka had come to Gulbarga, some of the students represented that the examinations should be held at the Karnataka University. The Chancellor specifically assured that there will be no difficulty in holding the examinations in the Gulbarga University. I was also present there.